# ಮುತ್ತು ಮುತ್ತು ಸಿಹಿ ಮುತ್ತು!

■ ಪ್ರವೀಣ ಕುಲಕರ್ಣಿ



'ಉತ್ತರಧ್ರುವದಿಂ ದಕ್ಷಿಣಧ್ರುವಕೂ ಚುಂಬಕ ಗಾಳಿಯು ಬೀಸುತಿದೆ' ಎಂದರು ವರಕವಿ ದ.ರಾ. ಬೇಂದ್ರೆ. ಆದರೆ, ಚೀನಾದ ಈ ಮಷಿನ್ ನೋಡಿ; ಚುಂಬನದ ಅಲೆ ಜಗತ್ತಿನ ಯಾವ ಮೂಲೆಯಿಂದ ಯಾವ ಮೂಲೆಗೆ ಬೇಕಾದರೂ ಓಡಿಬರಬಹುದು ಎನ್ನುತ್ತಿದೆ. ಕೋವಿಡ್‌ನ ಲಾಕ್‌ಡೌನ್ ಕಾಲದ ಬೇಡಿಕೆಯಾಗಿ ದಿಢೀರ್ ಎಂದು ಉದ್ಭವವಾದ ಈ ಯಂತ್ರ ಈಗ ಚೀನಾದ ತುಂಬಾ ಸೆಲೆಬ್ರಿಟಿ. ಹಾಗೆಯೇ ಇದನ್ನು ಕಂಡುಹಿಡಿದ ಝಾವೊ ಜೈನಬೊ ಕೂಡ ಆ ದೇಶದ ಊರಿಂದೂರಿಗೆ ಈಗ ಸೆಲೆಬ್ರಿಟಿಯಂತೆಯೇ ಓಡಾಡುತ್ತಿದ್ದಾರೆ. ಎಲ್ಲೋ ದೂರದಲ್ಲಿರುವ ಸಂಗಾತಿಗೆ ಕುಳಿತಲ್ಲಿಂದಲೇ ಮುತ್ತು ಕೊಡಲು ಈ ಯಂತ್ರ ನೆರವಾಗುತ್ತದಂತೆ! ಮುತ್ತಿನ ಮತ್ತಿನಲ್ಲಿ ಮೈಮರೆಯಲು ಹಾತೊರೆಯುವವರಿಗೆಲ್ಲ ಈ ಕಿಸ್ಸಿಂಗ್ ಮಷಿನ್ ಮತ್ತು ಅದನ್ನು ಕಂಡುಹಿಡಿದ ಝಾವೊ ಅಂದರೆ ಈಗ ಆಪ್ಯಾಯಮಾನ.

ನೀವು ಕೊಡುವ ಮುತ್ತಿನ ದತ್ತಾಂಶವನ್ನು ಸಿಲಿಕಾನ್ ತುಟಿಗಳೊಳಗೆ ಅಡಗಿ ಕುಳಿತ ಮೋಷನ್ ಸೆನ್ಸರ್‌ಗಳು ಸಂಗ್ರಹಿಸಿಕೊಂಡು ಮೊಬೈಲ್ ಮೂಲಕ ಸಂಪರ್ಕ ಸಾಧಿಸಿದ ಸಂಗಾತಿಗೆ ಅದೇ ತೀವ್ರತೆಯಲ್ಲಿ ಆ ಮುತ್ತುಗಳನ್ನು ದಾಟಿಸುತ್ತವಂತೆ. ಬ್ಲೋಯಿಂಗ್ ಕಿಸ್‌ನ ಸದ್ದನ್ನೂ ಈ ಮಷಿನ್ ಲಬಕ್ಕನೆ ಎಳೆದುಕೊಂಡು ಅದಕ್ಕಾಗಿ ಕಾದು ಕುಳಿತವರ ಅಧರಕ್ಕೆ ದಾಟಿಸುವ ಕೆಲಸವನ್ನೂ ಮಾಡುತ್ತದಂತೆ. ಕಚೇರಿಯಲ್ಲಿರಲಿ, ಪ್ರವಾಸದಲ್ಲಿರಲಿ ಅಥವಾ ಯಾವುದೇ ಗಹನ ಮೀಟಿಂಗ್ ಮುಗಿಸಿಕೊಂಡು ಕ್ಯಾಬಿನ್ನಿನಲ್ಲಿ ತಲೆಯ ಮೇಲೆ ಕೈಹೊತ್ತು ಕುಳಿತಿರಲಿ, ತನ್ನ ಇನಿಯ ಅಥವಾ ಇನಿಯಳ ಮುತ್ತು ಬೇಕೆನಿಸಿದಾಗಲೆಲ್ಲ ಈ ಮಷಿನ್ ಎಂದಿಗೂ ನಿರಾಸೆಯನ್ನು ಮಾಡುವುದಿಲ್ಲವಂತೆ.

ಸಿಲಿಕಾನ್ ತುಟಿಗಳ ಜತೆಗೆ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡ ಆ್ಯಪ್‌ಗೆ ಜೋಡಿಗಳು ಕನೆಕ್ಟ್ ಆಗಿಬಿಟ್ಟರೆ ಮುಗಿಯಿತು, ಎಷ್ಟು ಮುತ್ತುಗಳನ್ನಾದರೂ ವಿನಿಮಯ ಮಾಡಿಕೊಳ್ಳಬಹುದು. ಮೊಬೈಲ್ ಚಾರ್ಜಿಂಗ್ ಸಾಕೆಟ್‌ಗೆ ಸಿಲಿಕಾನ್ ತುಟಿಗಳನ್ನು ಕನೆಕ್ಟ್ ಮಾಡಿ ಮುತ್ತಿನ ರಾಶಿಯನ್ನೇ ತೆಗೆಯಬಹುದು!

ಮುತ್ತನ್ನು ಖುದ್ದಾಗಿ ಸ್ವೀಕರಿಸಿದಾಗ ಮಾತ್ರವಲ್ಲವೇ ಅದರ ಅನುಭೂತಿಯನ್ನು ಪಡೆಯಲು ಸಾಧ್ಯವಾಗುವುದು? ಇಂತಹ ಮಷಿನ್ ಅನ್ನು ಯಾಕಯ್ಯ ಕಂಡುಹಿಡಿದೆ ಎಂದು ಝಾವೊ ಅವರನ್ನು ಕೇಳಿನೋಡಿ. 'ಮೂರು ವರ್ಷಗಳಿಂದ ನಮ್ಮ ದೇಶದಲ್ಲಿ ಕೋವಿಡ್ ಸಾಂಕ್ರಾಮಿಕ ಕಾಡುತ್ತಿದೆ. ಸುದೀರ್ಘ ಲಾಕ್‌ಡೌನ್‌ಗಳು ನಿನ್ನೆ–ಮೊನ್ನೆವರೆಗೆ ನಮ್ಮ ಜನರನ್ನು ದುಃಸ್ವಪ್ನದಂತೆ ಕಾಡಿವೆ. ಲಕ್ಷಾಂತರ ಸಂಗಾತಿಗಳು ತಾವು ಉಳಿದುಕೊಂಡ ಅಪಾರ್ಟ್‌ಮೆಂಟ್‌ಗಳಲ್ಲೇ ತಿಂಗಳುಗಟ್ಟಲೆ ಉಳಿಯಬೇಕಾಗಿತ್ತು. ತಮ್ಮ ಒಡನಾಡಿಗಳ ಜೊತೆ ಒಂದು ಸಿಹಿಮುತ್ತು ವಿನಿಮಯವಿಲ್ಲದೆ ಅವರು ಒದ್ದಾಡುತ್ತಿದ್ದರು. ಹೀಗಾಗಿ ಇಂತಹ ಮಷಿನ್ ಅಗತ್ಯವಿದೆ ಎನಿಸಿತು' ಎಂದು ಉತ್ತರಿಸುತ್ತಾರೆ. 'ಲಾಕ್‌ಡೌನ್ ಸಮಯದಲ್ಲಿ ನನ್ನ ಗೆಳತಿಯ ಜತೆ ಒಂದು ಮುತ್ತು ವಿನಿಮಯ ಮಾಡಿಕೊಳ್ಳುವುದು ಸಾಧ್ಯವಾಗಿರಲಿಲ್ಲ ಗೊತ್ತೆ' ಎಂದು ಝಾವೊ ಕಣ್ಣು ಮಿಟುಕಿಸುತ್ತಾರೆ.

'ಎಂಯುಎ' ಎಂದು ಹೆಸರಾಗಿರುವ ಈ ಮಷಿನ್ ಕಳೆದ ಜನವರಿಯಲ್ಲಷ್ಟೇ ಮಾರುಕಟ್ಟೆಗೆ ಬಿಡುಗಡೆಯಾಗಿದೆ. 260 ಯುವಾನ್‌ಗೆ ಒಂದರಂತೆ ಸಿಗುವ (₹3200) ಎಂಯುಎ, ಚೀನಾದ ತುಂಬಾ ಮಸಾಲೆ ದೋಸೆಯಂತೆ ಬಿಕರಿಯಾಗುತ್ತಿದೆ. ಲಕ್ಷಾಂತರ ಕಿಸ್ಸಿಂಗ್ ಮಷಿನ್‌ಗಳಿಗೆ ಆರ್ಡರ್‌ಗಳು ಬರುತ್ತಿದ್ದು, ಉತ್ಪಾದಕ ಸಂಸ್ಥೆಗೆ ಅದನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ನಿಮ್ಮ ಪ್ರಿಯತಮೆಯ ಕೆಂದುಟಿಯಂತೆ ಈ ತುಟಿಗಳು ಜೇನನ್ನೇನೂ ಸುರಿಸುತ್ತಿಲ್ಲವಲ್ಲ ಎಂದು ನೀವು ತಗಾದೆ ತೆಗೆಯುವಂತಿಲ್ಲ. ಈ ಸಿಲಿಕಾನ್ ತುಟಿಗಳು ಯೂನಿಸೆಕ್ಸ್ (ಗಂಡು–ಹೆಣ್ಣು ಯಾರು ಬೇಕಾದರೂ ಬಳಸಬಹುದು) ಆಗಿರುವುದರಿಂದ ಅವುಗಳು ಸ್ಪಂದಿಸುವ ರೀತಿಯಲ್ಲಿ, ಅವುಗಳ ಬಣ್ಣದಲ್ಲಿ, ಜೇನು ಸುರಿಸುವಲ್ಲಿ ನಿಮಗೆ ನಿಮ್ಮ ಪ್ರಿಯತಮೆ/ ಪ್ರಿಯತಮನ ತುಟಿಗಳ ಅನುಭೂತಿ ಸಿಗದಿದ್ದರೆ ಝಾವೊ ತಾನೇ ಏನು ಮಾಡಿಯಾರು? ಆದರೆ, ಚೀನಾದಲ್ಲಿ ಈ ತುಟಿಗಳ ಮಷಿನ್ ಬಳಕೆ ಮಾಡಿದವರು ಅದು ನಾಲಗೆಯನ್ನೂ ಹೊಂದಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತಿದ್ದಾರಂತೆ.

ಅಂದಹಾಗೆ, ಎಂಯುಎ ಏನೂ ಮೊದಲ ಕಿಸ್ಸಿಂಗ್ ಮಷಿನ್ ಅಲ್ಲ. ಟೋಕಿಯೊದ ಸಂಶೋಧಕರ ತಂಡವೊಂದು ಎಲೆಕ್ಟ್ರೊ–ಕಮ್ಯುನಿಕೇಷನ್ ತಂತ್ರಜ್ಞಾನ ಆಧಾರಿತ ಕಿಸ್ ಟ್ರಾನ್ಸ್‌ಮಿಷನ್ ಮಷಿನ್ ಕಂಡುಹಿಡಿದಿದ್ದರು. ಮಲೇಷ್ಯಾದ ಇಮ್ಯಾಜಿನರಿಂಗ್ ಸಂಸ್ಥೆ ಕಿಸ್ಸಿಂಗರ್ ಎಂಬ ಉಪಕರಣವನ್ನು ಶೋಧಿಸಿತ್ತು. ಈ ಮಷಿನ್, ಪ್ರಥಮ ಚುಂಬನ ದಂತಭಗ್ನ ಎಂಬ ಗಾದೆಮಾತನ್ನೇ ಸುಳ್ಳು ಮಾಡೀತು. ಏಕೆಂದರೆ, ಬೇಡದ ಚುಂಬನ ಪಡೆದವರು ದಂತಭಗ್ನ ಮಾಡಲು ಪಕ್ಕದಲ್ಲಿ ಏನೂ ಇರುವುದಿಲ್ಲವಲ್ಲ! ಅಂತೂ 'ಭೂರಂಗಕೆ ಅಭಿಸಾರಕೆ ಕರೆಯುತ/ ತಿಂಗಳು ತಿಂಗಳು ನವೆಯುತಿದೆ/ ತುಂಬುತ ತುಳುಕುತ ತೀರುತ ತನ್ನೊಳು/ ತಾನೇ ಸವಿಯನು ಸವಿಯುತಿದೆ' ಎಂಬ ಕವಿವಾಣಿಯಂತೆ ತುಟಿಗಳ ಸ್ಪರ್ಶಕ್ಕಾಗಿ, ಪ್ರೇಮಿಗಳ ಸಾಂಗತ್ಯಕ್ಕಾಗಿ ದಿನ ದೂಡುತ್ತಾ, ಕೂಡುವ ಸಮಯಕ್ಕಾಗಿ ಕಾಯುತ್ತಾ ಕೂರಬೇಕಿಲ್ಲ ಎನ್ನಲು ಹೊರಟಿದೆ ನೋಡಿ ಈ ಕಿಸ್ಸಿಂಗ್ ಮಷಿನ್! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65